## ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಪಿ.ಆರ್ ರಮೇಶ್**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1087**

**ಉತ್ತರಿಸಬೇಕಾದ ದಿನಾಂಕ : 21.09.2021**

| ಕ್ರ.ಸಂ. | ಪ್ರಶ್ನೆ | ಉತ್ತರ |
| --- | --- | --- |
| ಅ) | ರಾಜ್ಯದ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ರೈತರಿಗೆ ವಿತರಿಸುವ ಸಾಲಕ್ಕೆ ವಿಧಿಸುವ ಬಡ್ಡಿ ಮೊತ್ತದ ವಿವರ ನೀಡುವುದು; | ಸಹಕಾರ ಸಂಘಗಳು ರೈತರಿಗೆ ಶೂನ್ಯ ಬಡ್ಡಿದರ ಅನ್ವಯವಾಗುವಂತೆ ಬೆಳೆ ಸಾಲ ವಿತರಿಸುವ ಯೋಜನೆಯಲ್ಲಿ 2020–21 ನೇ ಸಾಲಿನಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಹೈನುಗಾರಿಕೆಗೆ ರೂ.2.00 ಲಕ್ಷಗಳವರೆಗೆ ಮತ್ತು ಬೆಳೆ ಸಾಲಕ್ಕಾಗಿ ರೂ.3.00 ಲಕ್ಷಗಳವರೆಗಿನ ಸಾಲಗಳಿಗೆ ರೈತರಿಗೆ ಶೇ.7ರ ಬಡ್ಡಿವಿಧಿಸಿ, ರೈತರು ನಿಗದಿತ ಅವಧಿಯಲ್ಲಿ ಸಾಲ ಮಾರುಪಾತಿಸಿದಲ್ಲಿ ರೈತರಿಂದ ಯಾವುದೇ ಬಡ್ಡಿ ವಸೂಲು ಮಾಡದೇ ಕೇಂದ್ರ ಸರ್ಕಾರದಿಂದ ಶೇ.3 ಮತ್ತು ರಾಜ್ಯ ಸರ್ಕಾರದಿಂದ ಶೇ.4 ರ ಬಡ್ಡಿ ಸಹಾಯಧನ ಕ್ಲೇಮು ಮಾಡಬೇಕಿರುತ್ತದೆ. ರೈತರು ರೂ.3.00 ಲಕ್ಷಗಳಿಗಿಂತ ಹೆಚ್ಚಿನ ಸಾಲ ಪಡೆದಲ್ಲಿ ಅಂತಹ ಪೂರ್ಣ ಸಾಲಕ್ಕೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ತಮ್ಮ ಸಂಘದ ನಿಯಮದಂತೆ ಸಾಮಾನ್ಯ ಬಡ್ಡಿದರ ವಿಧಿಸಬೇಕಿರುತ್ತದೆ.<br><br>ಸಹಕಾರ ಸಂಘಗಳು ರೈತರಿಗೆ ಶೇ.3 ರ ಬಡ್ಡಿದರ ಅನ್ವಯವಾಗುವಂತೆ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ ವಿತರಿಸುವ ಯೋಜನೆಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ರೂ.10.00 ಲಕ್ಷಗಳವರೆಗಿನ ಸಾಲಗಳಿಗೆ 2020–21 ನೇ ಸಾಲಿನಲ್ಲಿ ರೈತರಿಗೆ ಶೇ.7.80 ರ ಬಡ್ಡಿ ಆಕರಿಸಿ, ರೈತರು ನಿಗದಿತ ಅವಧಿಯಲ್ಲಿ ಕಂತುಗಳನ್ನು ಮರುಪಾವತಿಸಿದಲ್ಲಿ, ರೈತರಿಂದ ಶೇ.3ರ ಬಡ್ಡಿಯಲ್ಲಿ ಪಡೆದು, ರಾಜ್ಯ ಸರ್ಕಾರದಿಂದ ಶೇ.4.80ರ ಬಡ್ಡಿ ಸಹಾಯಧನ ಕ್ಲೇಮು ಮಾಡಬೇಕಿರುತ್ತದೆ. ರೂ.10.00 ಲಕ್ಷಗಳಿಗಿಂತ ಹೆಚ್ಚಿನ ಸಾಲ ಪಡೆದಲ್ಲಿ ಅಂತಹ ಪೂರ್ಣ ಸಾಲಕ್ಕೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ತಮ್ಮ ಸಂಘದ ನಿಯಮದಂತೆ ಸಾಮಾನ್ಯ ಬಡ್ಡಿದರ ವಿಧಿಸಬೇಕಿರುತ್ತದೆ. |

....2

| | | |
|---|---|---|
| ಆ) | ಇತ್ತೀಚೆಗೆ, ರಾಜ್ಯದ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಹಲವು ಜಿಲ್ಲೆಗಳಲ್ಲಿ ರೈತರಿಗೆ ಕಿಸಾನ್ ಕ್ರೆಡಿಟ್ ಸಾಲದ ಮುಖಾಂತರ ಸಾಲ ನೀಡಿಅಧಿಕ ಮೊತ್ತದ ಬಡ್ಡಿ ವಸೂಲಾತಿ ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು.) | ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>ಬೆಳಗಾವಿ, ಬಳ್ಳಾರಿ, ಚಿಕ್ಕಮಗಳೂರು, ಹಾಸನ, ಕೊಡಗು, ಕೋಲಾರ ಮತ್ತು ಚಿಕ್ಕಾಬಳ್ಳಾಪುರ, ಮೈಸೂರು ಮತ್ತು ಶಿವಮೊಗ್ಗ ಡಿಸಿಸಿ ಬ್ಯಾಂಕಿನ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು 2020–21 ರಲ್ಲಿ ರೂ.3.00 ಲಕ್ಷಗಳಿಗಿಂತ ಹೆಚ್ಚಿನ ಸಾಲ ಪಡೆದ ರೈತರಿಂದ 2021–22 ನೇ ಸಾಲಿನಲ್ಲಿ ಸಾಮಾನ್ಯ ಬಡ್ಡಿದರ ವಸೂಲು ಮಾಡುತ್ತಿರುತ್ತವೆ. ರೂ.3.00 ಲಕ್ಷಗಳಿಗಿಂತ ಹೆಚ್ಚಿನ ಸಾಲ ವಿತರಿಸಿದ ಬ್ಯಾಂಕುಗಳ ವಿವರವನ್ನು **ಅನುಬಂಧದಲ್ಲಿ** ನೀಡಲಾಗಿದೆ. |
| ಇ) | ಕರೋನ ಸಂಕಷ್ಟ ಬೆಳೆಹಾನಿ ಮತ್ತು ಇನ್ನಿತರೆ ಸಂಕಷ್ಟದಲ್ಲಿ ಜೀವನ ಸಾಗಿಸುತ್ತಿರುವ ರೈತರಿಗೆ ಅಕ್ರಮವಾಗಿ ಹೆಚ್ಚುವರಿ ಬಡ್ಡಿ ವಿಧಿಸಿ ಸಾಲ ವಸೂಲಾತಿ ಮಾಡುತ್ತಿರುವ ಕುರಿತು ಸರ್ಕಾರದ ನಿಲುವೇನು? (ವಿವರ ನೀಡುವುದು.) | 2020–21 ನೇ ಸಾಲಿನಲ್ಲಿನ ಸರ್ಕಾರದ ಆದೇಶದನ್ವಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ರೂ.3.00 ಲಕ್ಷಗಳಿಗಿಂತ ಹೆಚ್ಚಿನ ಬೆಳೆ ಸಾಲಗಳಿಗೆ ಮತ್ತು ಸುಸ್ತಿ ಸಾಲಗಳಿಗೆ ಹಾಲಿ ಇರುವ ನಿಯಮಗಳಂತೆ ಸಾಮಾನ್ಯ ಬಡ್ಡಿದರದಲ್ಲಿ ಸಾಲ ವಸೂಲು ಮಾಡಲು ಅವಕಾಶವಿರುತ್ತದೆ. |

**ಸಂಖ್ಯೆ: ಸಿಒ 271 ಸಿಎಲ್‌ಎಸ್ 2021**

ಎಸ್.ಟಿ. ಸೋಮಶೇಖರ್

**(ಎಸ್.ಟಿ ಸೋಮಶೇಖರ್)**

ಸಹಕಾರ ಸಚಿವರು